


ಕೇಶವ ಮಳಗಿ

# ಸುನಯನ

## ಭಾಗ-1

ಅವನು, ಆ ಹುಡುಗ – ದೂರದಿಂದ ತುಸು ಕುಳ್ಳಗೆ, ಹತ್ತಿರದಿಂದ ತುಸು ಎತ್ತರಕ್ಕೆ ಕಾಣುತ್ತ ಎಲ್ಲಿಂದ ನೋಡಿದರೂ ಫಳ ಹೊಳೆವ ಕಂಗಳ, ಒರಟು ಕಪ್ಪುಗೂದಲ ಆ ಅದೇ ಹುಡುಗ: ಯಾವ ಕ್ಷಣದಲ್ಲಿ, ಯಾಕೆ , ಹೇಗೆ ನನ್ನ ಬದುಕಿಗೆ ಬಂದನೊ ಗೊತ್ತಾಗುತ್ತಿಲ್ಲ. ಹಲವೊಮ್ಮೆ ಹಾಗೇ. ಎಷ್ಟೆಲ್ಲ ಚೌಕಟ್ಟು ಹಾಕಿಕೊಂಡು ಇದು ಹೀಗೆ ಎಂದು ಸಿದ್ಧ ಚಿತ್ರಪಟದ ಹಾಗೆ ಬದುಕು ನಡೆಸಲು ಯತ್ನಿಸಿದರೂ ಚಿತ್ರ ಅವುಗಳ ಬಣ್ಣ, ಚೌಕಟ್ಟಿನ, ಪ್ರಶ್ನೆಗಳ ಪರಿಧಿ ಮೀರಿ ಬೆಳೆದುಬಿಡುತ್ತದೆ. ಬೇಡ, ಯಾವುದರ ಕಾರ್ಯ ಕಾರಣ ಗೊತ್ತಾಗುವುದು; ಗೊತ್ತಾಗಲು ಬಗೆದು ನೋಡುವುದು ಬೇಡ, ಅಜ್ಜನಂತೆ.